# ಪ್ರಹಸನ ಪ್ರಸಂಗ

ನಾವು ಕೆಲಸವನ್ನು ತುಂಬ ಯಾಂತ್ರಿಕವಾಗಿ ಮಾಡುತ್ತೇವೆ—ಮೈಮರೆತು ಬಿಡುತ್ತೇವೆ. ನಮ್ಮ ಜಾಗೃದವಸ್ಥೆಗೂ ಸ್ವಪ್ನಾವಸ್ಥೆಗೂ ಹೆಚ್ಚು ವ್ಯತ್ಯಾಸವೇ ಇರುವುದಿಲ್ಲ. ಆಧ್ಯಾತ್ಮಿಕ ಸ್ಥಿತಿಯೆಂದರೆ ಚಿರಜಾಗೃತಾವಸ್ಥೆ. ಅದರ ಬಗ್ಗೆ ಮಾತನಾಡುವಾಗಲೇ ಸ್ವಪ್ನಾವಸ್ಥೆಗೆ ಹೋಗುವುದು ಎಂಥ ವಿಪರ್ಯಾಸ!

"ಇಬ್ಬರು ಕ್ರೈಸ್ತ ಬೋಧಕರು ಪರಸ್ಪರ ಮಾತನಾಡುತ್ತಿದ್ದರು. ಅವರಲ್ಲಿ ಒಬ್ಬನು ತನ್ನ ಅನುಭವವನ್ನು ಕುರಿತಾಗಿ ಹೇಳಿದ "ಕಳೆದ ಭಾನುವಾರ ನನಗೆ ತುಂಬ ಭಯಂಕರ ಅನುಭವವಾಯಿತು—ಮನಸ್ಸಿಗೆ ಬಹಳ ಬೇಸರ ಉಂಟಾಯಿತು."

"ಏನದು ಆ ಅನುಭವ?"—ಇನ್ನೊಬ್ಬನು ವಿಚಾರಿಸಿದ.

"ನನಗೊಂದು ಕನಸಾಯಿತು. ಅದರಲ್ಲಿ ನಾನು ವೇದಿಕೆಯ ಮೇಲೆ ನಿಂತು ಉಪನ್ಯಾಸ ಮಾಡುತ್ತಿದ್ದೆ."

"ಒಳ್ಳೆಯ ಕನಸೆ. ಅದರಲ್ಲಿ ಭಯಂಕರವಾದುದೇನಿದೆ?"

"ಅಷ್ಟೇ ಅಲ್ಲ. ನನಗೆ ಎಚ್ಚರವಾದಾಗ ಗೊತ್ತಾಯಿತು, ನಾನು ನಿಜವಾಗಿಯೂ ವೇದಿಕೆಯ ಮೇಲೆ ಉಪನ್ಯಾಸ ಮಾಡುತ್ತಿದ್ದುದು."

* * * *

ನಮ್ಮ ಧಾರ್ಮಿಕ ಕ್ರಿಯೆಗಳಿಂದಾಗಲಿ, ಸತ್ಕಾರ್ಯಗಳಿಂದಾಗಲಿ ಸ್ವರ್ಗವನ್ನು ಪಡೆಯಲಾಗುವುದಿಲ್ಲ. ಅದನ್ನು ಪಡೆಯಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಏನು ಮಾಡಿದರೂ ಅದು ದೊರೆಯುವುದಿಲ್ಲ. ನಿಜವಾದ ಸ್ವರ್ಗಪ್ರಾಪ್ತಿ ಮೃತ್ಯುವಿನಿಂದ—ಅಹಂಕಾರದ ಸಾವಿನಿಂದ.

ಒಬ್ಬ ಉಪಾಧ್ಯಾಯನು ತರಗತಿಯಲ್ಲಿ ವಿದ್ಯಾರ್ಥಿಯೊಬ್ಬನನ್ನು ಪ್ರಶ್ನಿಸಿದನು: "ನೋಡಪ್ಪ, ನನ್ನಲ್ಲಿರುವ ಆಸ್ತಿಯನ್ನೆಲ್ಲ ದಾನ ಮಾಡಿದರೆ ನಾನು ಸ್ವರ್ಗಕ್ಕೆ ಹೋಗುತ್ತೇನೆಯೇ?"

*ವಿದ್ಯಾರ್ಥಿ* : "ಇಲ್ಲ."

*ಉಪಾಧ್ಯಾಯ* : "ನಾನು ಚರ್ಚು ಮುಂತಾದ ಪವಿತ್ರ ಸ್ಥಳಗಳಲ್ಲಿ ಕೈಂಕರ್ಯ ಮಾಡಿದರೆ ಸ್ವರ್ಗಕ್ಕೆ ಹೋಗಬಹುದೆ?"

*ವಿದ್ಯಾರ್ಥಿ* : "ಇಲ್ಲ."

*ಉಪಾಧ್ಯಾಯ* : "ಬಡಬಗ್ಗರ ಸೇವೆ ಮಾಡಿದರೆ?"

*ವಿದ್ಯಾರ್ಥಿ* : "ಇಲ್ಲ."

*ಉಪಾಧ್ಯಾಯ* : "ಹಾಗಾದರೆ ಸ್ವರ್ಗಕ್ಕೆ ಹೋಗಲು ನಾನು ಏನು ಮಾಡಬೇಕು?"

*ವಿದ್ಯಾರ್ಥಿ* : "ಸಾಯಬೇಕು."

ಭಗವಂತನು ಭಾವಗ್ರಾಹಿ, ಶಬ್ದಗ್ರಾಹಿಯಲ್ಲ. ಪ್ರಾರ್ಥಿಸುವಾಗ ಅನೇಕ ಶಬ್ದಗಳನ್ನು ಉಪಯೋಗಿಸುವ ಆವಶ್ಯಕತೆಯಿಲ್ಲ. ಶಬ್ದಜಾಲದಲ್ಲಿ ಭಾವವು ಬಂಧಿತವಾಗಬಾರದು. ಮಗುವಿನಂತಹ ಸರಳತೆ ಮತ್ತು ಶ್ರದ್ಧೆ ಇದ್ದರೆ ನಾವು ಹೇಗೇ ಪ್ರಾರ್ಥಿಸಿದರೂ ಭಗವಂತನು ನಮ್ಮ ಭಾವಕ್ಕನುಗುಣವಾಗಿ ಉತ್ತರಿಸುತ್ತಾನೆ.

ಹಿರಿಯ ವಯಸ್ಸಿನ ವ್ಯಕ್ತಿಯೊಬ್ಬನು ತನ್ನ ಮನೆಯ ತೋಟದಲ್ಲಿ ಓಡಾಡುತ್ತಿದ್ದನು. ಅವನಿಗೆ ಏನೊ ಶಬ್ದ ಕೇಳಿಸಿತು. ಅವನು ಅತ್ತ ಕಡೆ ಹೋಗಿ ನೋಡಿದಾಗ ತುಂಬ ವಿಸ್ಮಯಕರ ದೃಶ್ಯವನ್ನು ಕಂಡನು. ಅವನ ಚಿಕ್ಕ ವಯಸ್ಸಿನ ಮೊಮ್ಮಗಳು ಅತ್ಯಂತ ಭಕ್ತಿಭಾವದಿಂದ ವರ್ಣಮಾಲೆಯನ್ನು ಪಠಿಸುತ್ತಿದ್ದಳು.

"ಇದೇನು ನೀನು ಮಾಡುತ್ತಿರುವುದು?" ಅವನು ಕೇಳಿದ.

"ನಾನು ಪ್ರಾರ್ಥನೆ ಮಾಡುತ್ತಿದ್ದೇನೆ."

"ಇದೆಂಥ ಪ್ರಾರ್ಥನೆ, ಕೇವಲ ಅಕ್ಷರಗಳನ್ನು ಉಚ್ಚರಿಸುತ್ತಿದ್ದೀಯಲ್ಲ!"—ಅಜ್ಜ ಆಶ್ಚರ್ಯದಿಂದ ಕೇಳಿದ.

ಮೊಮ್ಮಗಳು ಹೇಳಿದಳು : "ನನಗೆ ಯಾವ ಶಬ್ದಗಳನ್ನು ಉಪಯೋಗಿಸಬೇಕೆಂದು ಗೊತ್ತಿಲ್ಲ. ಆದ್ದರಿಂದ ನಾನು ಎಲ್ಲ ಅಕ್ಷರಗಳನ್ನೂ ಉಚ್ಚರಿಸುತ್ತಿದ್ದೇನೆ. ದೇವರು ಅವುಗಳನ್ನು ಸರಿಯಾಗಿ ಜೋಡಿಸಿಕೊಳ್ಳುತ್ತಾನೆ. ಏಕೆಂದರೆ ನನ್ನ ಮನಸ್ಸಿನಲ್ಲಿರುವುದು ಅವನಿಗೆ ಗೊತ್ತು."

* *

ಜಗದ್ವಿಖ್ಯಾತ ಪತ್ತೇದಾರಿ ಕಾದಂಬರಿಕಾರಳಾದ ಅಗಥಾ ಕ್ರಿಸ್ಟಿಯವರ ಪತಿ ಒಬ್ಬ ಪ್ರಸಿದ್ಧ ಪ್ರಾಕ್ತನಸಂಶೋಧಕ (Archaeologist). ಒಬ್ಬರು ಆಕೆಯನ್ನು ಕೇಳಿದರು : "ನಿಮ್ಮಲ್ಲಿ ಅಸಾಧ್ಯ ಕಲ್ಪನಾಶಕ್ತಿಯಿದೆ. ಆದರೂ ಪ್ರಾಚೀನಪ್ರಿಯನೊಬ್ಬನನ್ನು ಮದುವೆಯಾಗಲು ಕಾರಣವೇನು?" ಆಕೆಯ ಉತ್ತರ : "ಯಾವ ಹೆಣ್ಣಿಗೇ ಆಗಲಿ ದೊರೆಯಬಹುದಾದ ಅತ್ಯುತ್ತಮ ಗಂಡನೆಂದರೆ ಈ ಪ್ರಾಚೀನಶೋಧಕನೆ; ಏಕೆಂದರೆ ಹೆಣ್ಣಿಗೆ ವಯಸ್ಸಾದಷ್ಟೂ ಈ ಪ್ರಾಚೀನಶೋಧಕ ಗಂಡ ಅವಳಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತ ಹೋಗುತ್ತಾನೆ."

* *

ನ್ಯಾಯಾಧೀಶ : "ನಿನ್ನ ವಯಸ್ಸು?"

ಮಹಿಳೆ : "೩೫"

ನ್ಯಾಯಾಧೀಶ ಹಳೆಯ ಕಡತ ತೆರೆದು ನೋಡುತ್ತಾನೆ. ಐದು ವರ್ಷಗಳ ಹಿಂದೆಯೂ ಆ ಮಹಿಳೆ ಅಪರಾಧಿಯಾಗಿ ಬಂದಿದ್ದಾಗ ತನ್ನ ವಯಸ್ಸು ೩೫ ಎಂದು ದಾಖಲಿಸಿದ್ದಳು. ಅವನು ಆಶ್ಚರ್ಯದಿಂದ ಕೇಳಿದ : "ಇವತ್ತೂ ನಿನಗೆ ೩೫ ವರ್ಷವೇ ಆಗಿರಲು ಹೇಗೆ ಸಾಧ್ಯ?"

ಮಹಿಳೆ : "ನೋಡಿ, ನಾನು ತುಂಬ ನಿಯತ್ತಿನ ವ್ಯಕ್ತಿ. ಒಮ್ಮೊಮ್ಮೆ ಒಂದೊಂದು ರೀತಿ ಹೇಳುವಂತಹವಳಲ್ಲ. ವಿಶೇಷವಾಗಿ ನ್ಯಾಯಾಲಯದಲ್ಲಿ ಮಾತನ್ನು ಬದಲಾಯಿಸುವ ಕೆಲಸ ಮಾಡುವುದೇ ಇಲ್ಲ." *